ವೇಳೆ ಮೆಕ್ಸಿಕೊದಲ್ಲೇ ಉಳಿದುಬಿಟ್ಟಿದ್ದರೆ ಪತ್ರಿಕೋದ್ಯಮ, ಬ್ಯೂರೊಕ್ರೆಸಿ ಇಲ್ಲವೇ ಮದ್ಯದಲ್ಲಿ ಮುಳುಗಿರುತ್ತಿದ್ದೆ. ಈ ಪ್ರಪಂಚದಿಂದ ಓಡಿಹೋದೆ. ಬಹುಶಃ ನನ್ನಿಂದ ಕೂಡ...

◆ **ಮತ್ತೆ 1959ರಲ್ಲಿ ಮೆಕ್ಸಿಕೊ ಬಿಟ್ಟು ಹೋದಿರಿ, ಅಲ್ಲವೇ?**

1971ರ ವರೆಗೆ ವಾಪಸ್ ಬರಲಿಲ್ಲ. ಆ ಹನ್ನೆರಡು ವರ್ಷಗಳು ಮತ್ತೊಂದು ಸಾಂಕೇತಿಕ ಸಂಖ್ಯೆ. ಮೆಕ್ಸಿಕೊ ಕಡೆಗಿನ ನನ್ನ ಸೆಳೆತ ತಡೆಯಲಾಗದ್ದು. ಹಾಗಾಗಿ, ವಾಪಸ್ ಬಂದೆ.

◆ **ಆ ಹನ್ನೆರಡು ವರ್ಷಗಳ ಬಗ್ಗೆ ತಿಳಿಸಿ. ಮೆಕ್ಸಿಕನ್ ರಾಯಭಾರಿಯಾಗಿ ಮೊದಲು ಪ್ಯಾರಿಸ್‌ಗೆ ಆಮೇಲೆ ಭಾರತಕ್ಕೆ, ಅನಂತರ ಇಂಗ್ಲೆಂಡ್ ಹಾಗೂ ಅಮೆರಿಕಕ್ಕೆ ಹೋದಿರಿ.**

ಹೊಸ ಕಾವ್ಯ ಪ್ರಪಂಚಗಳು, ಹೊಸ ದೇಶಗಳು, ಹೊಸರೀತಿಯ ಭಾವಗಳು, ಹೊಸ ಐಡಿಯಾಗಳನ್ನು ಅನ್ವೇಷಿಸಿದೆ. ನನ್ನ ಮೊದಲ ಅದ್ಭುತ ಅನುಭವ ಭಾರತ. ಮತ್ತೊಂದು ದೇಶ, ಮತ್ತೊಂದು ಬಗೆಯ ಮನುಷ್ಯರು, ಬೇರೆ ದೇವರುಗಳು – ಒಟ್ಟಾರೆ ಭಿನ್ನ ನಾಗರಿಕತೆ. ಅಲ್ಲಿದ್ದ ಆರು ವರ್ಷಗಳಲ್ಲಿ ಆ ಉಪಖಂಡದಲ್ಲಿ ಓಡಾಡಿದೆ. ಸಿಲೋನ್ ಮತ್ತು ಅಫ್ಘಾನಿಸ್ತಾನಗಳಲ್ಲಿದ್ದೆ. ಆ ಎರಡು ದೇಶಗಳು ಸಾಂಸ್ಕೃತಿಕವಾಗಿ ವಿರುದ್ಧ ಧ್ರುವಗಳು. ಭಾರತದ ಬಗ್ಗೆ ಹೇಳಬೇಕೆಂದರೆ ನನ್ನ ಕಣ್ಮುಂದೆ ಸುಳಿವ ಚಿತ್ರ ಇದು: ವಿಶಾಲವಾದ ಬಯಲು, ದೂರದಲ್ಲಿ ಬಿಳಿಯ ಪಾಳುಬಿದ್ದ ಸ್ಮಾರಕ, ರಭಸವಾಗಿ ಹರಿಯುತ್ತಿರುವ ನದಿ, ದೊಡ್ಡ ಮರ. ಆ ಮರದ ಕೊಂಬೆ, ಬಿಳಲುಗಳ ನಡುವಿನಿಂದ ಹೆಣ್ಣೊಬ್ಬಳು ಅವತರಿಸುತ್ತಾಳೆ... ನೋಡುತ್ತಿದ್ದಂತೆ ಪ್ರೀತಿ ಹುಟ್ಟಿ, ಮದುವೆಯಾದೆ.

◆ **ಏಷ್ಯಾದ ಚಿಂತನೆಗಳ ಬಗ್ಗೆ ನಿಮಗೆ ಯಾವಾಗ ಆಸಕ್ತಿಯುಂಟಾಯಿತು?**

ಮೊದಲ ಸಲ 1952ರಲ್ಲಿ ಪೂರ್ವದ ಕಡೆಗೆ ಹೋದೆ. ಆಗ ಭಾರತ ಮತ್ತು ಜಪಾನಿನಲ್ಲಿ ಒಂದು ವರ್ಷ ಕಳೆದೆ. ಆ ದೇಶಗಳ ತತ್ವಶಾಸ್ತ್ರ ಮತ್ತು ಕಲಾತ್ಮಕ ಸಂಪ್ರದಾಯಗಳ ಕುರಿತು ತಿಳಿಯಲಾರಂಭಿಸಿದೆ. ಹಲವಾರು ಜಾಗಗಳಿಗೆ ಭೇಟಿ ನೀಡಿದೆ. ಭಾರತೀಯ ಚಿಂತನೆಯ ಕೆಲವು ಮಹತ್ವದ ಕೃತಿಗಳನ್ನು ಓದಿದೆ. ಚೀನಾ ಮತ್ತು ಜಪಾನಿನ ಕವಿಗಳು ಮತ್ತು ಚಿಂತಕರು ಬಹುಮುಖ್ಯ ಅನ್ನಿಸಿದರು. 1962ರಿಂದ 1968ರ ವರೆಗೆ ಎರಡನೆಯ ಬಾರಿ ಭಾರತಕ್ಕೆ ಹೋಗಿ ನೆಲೆಸಿದೆ. ಆ ಸಮಯದಲ್ಲಿ ಹಲವಾರು ಮಹತ್ವದ ತತ್ವಶಾಸ್ತ್ರ ಮತ್ತು ಧಾರ್ಮಿಕ ಗ್ರಂಥಗಳನ್ನು ಓದಿದೆ. ಬೌದ್ಧಧರ್ಮವು ನನ್ನನ್ನು ಬಹುವಾಗಿ ಪ್ರಭಾವಿಸಿತು.

◆ **ಮತಾಂತರ ಆಗಬೇಕೆಂದುಕೊಂಡಿರಾ?**

ಇಲ್ಲ. ಆದರೆ, ಬೌದ್ಧಧರ್ಮವನ್ನು ಅಧ್ಯಯನ ಮಾಡುವುದು ಮಾನಸಿಕ ಹಾಗೂ ಆಧ್ಯಾತ್ಮಿಕ ವ್ಯಾಯಾಮದಂತೆನಿಸಿತು. ಅಹಂ ಮತ್ತದರ ಮರೀಚಿಕೆಯ ಕುರಿತು ಯೋಚಿಸಲು ಸಹಾಯಮಾಡಿತು. ಅಹಂನ ಆರಾಧನೆಯೇ ಆಧುನಿಕ ಮನುಷ್ಯನ ಶ್ರೇಷ್ಠ ವಿಗ್ರಹಾರಾಧನೆ ಎನ್ನುವಂತಾಗಿದೆ. ಬೌದ್ಧಧರ್ಮವು ಅಹಂ ಮತ್ತು ವಾಸ್ತವದ ವಿಮರ್ಶೆಯೆನಿಸಿತು. ಆಮೂಲಾಗ್ರ ಟೀಕೆಯು ನಿರಾಕರಣೆಯಲ್ಲಿ ಅಲ್ಲ ಸ್ವೀಕಾರದಲ್ಲಿ ಕೊನೆಗೊಳ್ಳುತ್ತದೆ. ಭಾರತದಲ್ಲಿ ಎಲ್ಲ ಮಹತ್ವದ ಬೌದ್ಧ ದೇವಾಲಯಗಳಲ್ಲಿ (ಅನಂತರದಲ್ಲಿ ಕಟ್ಟಿದ ಹಿಂದೂ ದೇವಾಲಯಗಳು ಕೂಡ ಬೃಹತ್ತಾಗಿ, ವಿಸ್ತಾರವಾಗಿವೆ) ಇಂದ್ರಿಯ ಶಿಲ್ಪಗಳು ಮತ್ತು ಉಬ್ಬುಶಿಲ್ಪಗಳಿವೆ. ಜಗತ್ತನ್ನು ಅಲ್ಲಗಳೆಯುತ್ತ ನಿರಾಕರಣೆ ಹಾಗೂ ಶೂನ್ಯತೆಯನ್ನು ಬೋಧಿಸುವ ಧಾರ್ಮಿಕ, ತತ್ವಶಾಸ್ತ್ರದ ಸಂಪ್ರದಾಯವು ದೇಹ